Azim Premji Foundation

Karnataka Field Institutes | July - 2016 | Issue No.: 47

ಬಯಲು Bayalu

....a space of our own

To:

Dear …,

I know you can't read and you will not receive this letter, but I want to write to you because I believe that there are other non-physical means which can't be explained with the current technology will get you the information of this letter.

I keep thinking about you. I keep dreaming about the way I want to spend my time and life with you. In the middle of the night if I wake up thinking about you. Basically I feel that I exist in this world just to have you with me. The purpose of life has become you. I don't know where you are. I don't know whether I can meet you. I don't even know whether you exist in this world yet. But you are there in my heart. I think you have recently arrived to this world may be because of that I can hear your call very often. I think you arrived on the night when I woke and started thinking about you and crying. There was no reason for me to cry but the love towards you made me cry. We generally laugh about bad situations after some days or years. But I can't still laugh about what happened to me on that night. I can't see it as a joke yet. It was not the first time I thought about you, I have been thinking about you for a long time but my thought got strengthened from that night. I believed my own feelings from then about you.

I can see you from far. But I can only see how tall you but can't see your face, eyes, mouth etc. I can see a blurred picture of you. However you are, you are my love. Sometimes I can hear your footsteps. When will that be true? Will you please give me the chance to walk with you holding your little fingers? Will you please arrive in my life very soon and ask me many innocent questions which comes to your little brain? Will you ask me why did I left you in that place for such a long time? Please no. I will not have the answer.

It worries me more when I think about your whereabouts. It worries me that whether you have eaten enough food, whether you have somebody to love you, whether you have got a comfortable place to sleep on. Are all your needs are being fulfilled by you not screaming for it.

There are lot of confusions to bring you to me. I question myself that am I the right person to bring you up. May be you deserve better person/s than me. Whatever decision I have taken so far, most of them are good. I may take quick decisions but I won't take bad decision. I want to make a clever decision which is good for both of us. My other part of my mind says that I am delaying things which is not good for you. But I will wait and take a decision. I keep thinking about that will my parents accept you as they are accepting other little ones in my family? Will my sibling feel good about it? Will my niece and nephews be very jealous of you? Can I really give you a family? When I make my mind clear on all (or many) these things I will start looking for you. You exist in my heart forever and I love you a lot. If I can't meet you in my lifetime please forgive me.

- Soumya



ಮಗನಿಗೆ.....,

'ನಿನ್ನ ಅರಿತೆನಾದರಿಂ ನೀ ಎನ್ನರಿಯೆ
ಎನಲು ನೀ ಅರಿತುದುದೆಲ್ಲಾ ಸುಳ್ಳು'

ನಿನ್ನ ಪ್ರಶ್ನೆಗಳಿಗೆಲ್ಲಾ ಈ ಎರಡು ಸಾಲುಗಳೆ ನನ್ನ ಉತ್ತರ. ನೀನೆಲ್ಲಿಯವರೆಗೂ ಅಪೇಕ್ಷಿತನಾಗಿರುತ್ತೀಯೋ ಅಲ್ಲಿಯವರೆಗೂ ಪ್ರೀತಿ, ಸ್ನೇಹ, ಮತ್ತಿತರ ಭಾವ ಬಂಧನಗಳಲ್ಲಿಯೇ ಸಿಲುಕಿ ತೊಳಲಾಡುವೆ. ಅವಳ ಬಗೆಗಿನ ನಿನ್ನ ಭಾವನೆಗಳು ಅವೆಲ್ಲವನ್ನೂ ಮೀರಿದ್ದಾಗಿರಬೇಕು. ಕೊಡುವುದಷ್ಟೆ ನಿನ್ನ ಅರಿವಿನಲ್ಲಿರಬೇಕು. ಅದರ ಪ್ರತಿಯಾಗಿ ಮತ್ತೊಂದನ್ನು ಅಪೇಕ್ಷಿಸುವುದಲ್ಲ. ನೀ ಅಪೇಕ್ಷಿಸಿದಷ್ಟೂ ಆಕೆಯ ಬಗೆಗಿನ ನಿನ್ನ ಅರಿವೆಲ್ಲಾ ತಪ್ಪಾಗುವವಷ್ಟೇ ಹೊರತು, ಆಕೆಯ ಅಂತರಾಳದ ಬಿಂಬವೆಂದೂ ನಿನ್ನ ಮನದಲ್ಲಿ ಮೂಡದು. ಅಪೇಕ್ಷಿಸುವುದರಲ್ಲಿ ತಪ್ಪೇನು? ಅದು ಸಹಜವಲ್ಲವೇ? ಸಹಜವೇ ನಿಜ. ಅದರಿಂದ ನೋವಾಗುವುದೂ ಸಹಜವೇ, ಆ ನೋವಿನಲ್ಲಿ ನೀ ನನಗೆ ಪತ್ರ ಬರೆಯುವುದೂ ಸಹಜವೇ. ಅಪೇಕ್ಷಿಸುವುದು ಎರಡು ಕಡೆಯಿಂದಲೂ ಅಪಾಯಕಾರಿಯೇ – ನನ್ನ ಕೇಳುವುದಾದರೆ 'ಅಪಾಯಕಾರಿ' ಎನ್ನುವ ಪದವನ್ನೇ ಬಳಸುತ್ತೇನೆ. ಅದು ಎಲ್ಲಾ ಸಮಯದಲ್ಲೂ ಫಲವನ್ನೀಯುತ್ತದೆನಲು ಸಾಧ್ಯವಿಲ್ಲ. ನೀ ಅಪೇಕ್ಷಿಸಿದ್ದು ನಿನಗೆ ದೊರೆಯದಿದ್ದಲ್ಲಿ ನೋವಾಗುವುದೂ ಸಹಜವೇ. ಹಾಗೆಂದ ಮಾತ್ರಕ್ಕೆ ನೀ ಅಪೇಕ್ಷಿಸಿದ್ದು ಆಕೆಯಿಂದ ದೊರೆತಲ್ಲಿ ಎಲ್ಲವೂ ಸರಿಯೆಂದಲ್ಲ. ಹಲವಾರು ಬಾರಿ ನಾವು ಅನ್ಯರಿಂದ ಯಾವುದೋ ಭಾವನೆಯ ಅಪೇಕ್ಷೆಯಲ್ಲಿ ಅವರ ಸ್ವಾತಂತ್ರ್ಯ, ಸ್ವೇಚ್ಛೆಗಳನ್ನು ಕಸಿದುಕೊಳ್ಳುತ್ತೇವೆ. ಅಂದರೆ ನಾನು ಅನ್ಯರನ್ನು ನಿರ್ಬಂಧಿಸುತ್ತೇನೆ ಎಂದಲ್ಲವೇ?

ಅರಿವುಗಳೆಲ್ಲಾ ಸಹಜವಾಗಿಯೇ ಕಾಲ ಕಳೆದಂತೆ ಮೂಡುತ್ತವೆ. ಇದೆಲ್ಲಾ ನಿನಗೆ ಹೇಳಬೇಕಾದಲ್ಲಿ, ನನಗೆಷ್ಟು ಅನುಭವವಿರಬೇಡ? ಅಕಸ್ಮಾತ್, ನಾನು ನಿನ್ನಮಳನ್ನು ವರಿಸದೆ ಇದ್ದಿದ್ದರಲ್ಲಿ, ಈ ಅರಿವು ನನಗೆ ಮೂಡುತ್ತಿರಲಿಲ್ಲವೇನೋ! ನಿನ್ನಮ್ಮನಿಂದ ನಾ ಇನ್ನೇನನ್ನಪೇಕ್ಷಿಸಲೋ? ಒಂದಷ್ಟು ಸಮಯದ ಏಕಾಂತವನ್ನು ಬಿಟ್ಟು! ನಿನ್ನಮ್ಮ ನನ್ನಲ್ಲಿ ಅಪೇಕ್ಷಿಸಿದಷ್ಟೂ, ನನ್ನ ಸ್ವೇಚ್ಛೆಗಳೆಲ್ಲಾ ಕುಮುರಿಹೋದವು. ಮೊನ್ನೆ ಮೊನ್ನೆಯಷ್ಟೆ ಡಾಕ್ಟರರ ಬಳಿ ಹೋದದ್ದು. ಎಂಥಾ ಸುಳ್ಳುಗಾರ್ತಿ! ಈಕೆಯ ಹೃದಯ ದೌರ್ಬಲ್ಯಕ್ಕೆ ನಿಜವಾದ ಕಾರಣ ಆ ಮಾತ್ರೆಯಲ್ಲ, ಆ ಮಾತ್ರೆಯ ಮೇಲಿರುವ ಬೆಲೆ! 'ಹೌದು ಸರ್. ಈಕೆಗೆ ಆ ಮಾತ್ರೆ ತೆಗೆದುಕೊಂಡಾಗಲೆಲ್ಲಾ ಆಗಾಗ ಎದಯುರಿ ಬರುವುದುಂಟು. ಎಡಗೈ ಎಳೆಯುವುದುಂಟು ..' ಹೀಗೆ ಹತ್ತಲವಾರು ಹೃದಯ ದೌರ್ಬಲ್ಯಕ್ಕೆಂದೇ ಇರುವ (ಅವ)ಲಕ್ಷಣಗಳನ್ನ ಎಲ್ಲೊ ಕಿಟಕಿ ನೋಡುತ್ತಾ, ಟೀಚರ್ ಮುಂದೆ ಮಗ್ಗಿ ಒದರುವ ಮಗುವ ಹಾಗೆ ಒದರಿದೆ. ಒಂದಷ್ಟು ಕಡಿಮೆ ಡೋಸೇಜಿನದೇನನ್ನೋ ಕೊಟ್ಟು ಕಳುಹಿಸಿದ. ನಿನ್ನಮ್ಮನಿಗೆ ನನ್ನ ಮೇಲೆ ಬಹಳ ಅಪೇಕ್ಷೆ – ಅಲ್ಲಾ ತಾನು ಅಪೇಕ್ಷಿಸಿದ್ದನ್ನು ನಾನು ತೀರಿಸಯೇ ತೀರಿಸುತ್ತೇನೆನ್ನುವ ನಂಬಿಕೆ.

ಅದು ಮೂವತ್ತರ ಹರೆಯ. ಆಕೆಯನ್ನು ನೋಡಿದಾಗ ನಾಚಿ ನೀರಾಗಿದ್ದಳು. ಆಹಾ! ಆಕೆಯ ಕೈ ನೇವರಿಸುತ್ತಾ, ನನ್ನಡೆಗೆ ಸೆಳೆಯುತ್ತಾ, ಹಿಂದಿನಿಂದ ಆಕೆಯ ಕತ್ತನ್ನು ಬಳಸಿ, ಮುಖವನ್ನು ತಿರಿಗಿಸಿ ಆಕೆಯ ಕೆನ್ನೆಯ ಮೇಲೆ ತುಟಿ ಬಿಂಬಿಸಬೇಕೆಂದುಕೊಳ್ಳುವಷ್ಟರಲ್ಲೇ ಅದು ಕನಸಾಗಿತ್ತು! ಆಕೆ ಕೋಣೆಯೊಳಗೆ ಬಂದೊಡನೆ ನಾನು ಗಂಡೆ ಎಂದು ನಾಚುವಷ್ಟು ಮಾತಿನ ರಾಡಿಯನ್ನು ರಾಚಿದ್ದಳು. ನಾನು ನಿಜ ನಾಚಿದ್ದೆ!

ಅದೊಂದು ಸಂಜೆ – ತುಂತುರು ಮಳೆ. ಅದರ ಕಂಪಿಗೆ ಮಾರಿ, ನಾ ಬಯಸಿದಂತೆ ನನ್ನೊಟ್ಟಿಗೆ ನನ್ನ ಸ್ಕೂಟರಿನ ಹಿಂದೆ ಕೂತು ಆ ತುಂತುರು ಮಳೆಯಲ್ಲೊಂದು 'ಜಾಲಿ ರೈಡಿಗೆ' ಬರುವಳೇನೋ ಎಂದು ಮೈಸೂರು ಮಲ್ಲಿಗೆಯನ್ನು ಕೊಂಡೊಯ್ದೆ. ಅದೋ, ಆ ಗೂಡಿನಲ್ಲಿದೆಯಲ್ಲ, ಮೈ, ಮುಖ ಕಾಣದೆ ಕುಂಕುಮ ಅರಿಶಿನಗಳನ್ನು ಮೆತ್ತಿಕೊಂಡಿರುವ ದೇವರು ಎನಿಸಿಕೊಂಡಿರುವ ಫೋಟೋ ಇರುವ ಗೂಡು, ಅಲ್ಲಿಯ ಫೋಟೋ ಆ ಮಲ್ಲಿಗೆಯನ್ನ ಅಪ್ಪಿತ್ತು. ಇನ್ನೇನು ಸಾಧ್ಯ, ಒಂದು ನಿಟ್ಟುಸಿರು ಬಿಟ್ಟು, ನಿನ್ನಮ್ಮ ಕೊಟ್ಟ ಕಾಫಿ ಕುಡಿದು, ಅವಳು ಹಾಕಿದ್ದ ಸೀರಿಯಲ್ ನೋಡುತ್ತಾ ಕುಳಿತೆ.

ಹೀಗೆ ಹೇಳಲು ಹಲವಾರಿವೆ. ಆಕೆಯಿಂದ ನಾನು ಬಯಸಿದ್ದು ಮತ್ತೇನನ್ನೂ ಅಲ್ಲ, ಪ್ರೀತಿಯೆಂದೆನಿಸುವ ಭಾವನೆಯನ್ನಷ್ಟೇ! ಅದನ್ನು ಮೀರಬೇಕೆನ್ನುವುದೇ ಈ ಸಂಸಾರ ಸಾಗರದಲ್ಲಿ ಈಜಲಿಳಿದಾಗ ನಾ ಅರಿತದ್ದು. ದಿನಕ್ಕೊಮ್ಮೆಯಾದರೂ ಆಕೆಯೊಟ್ಟಿಗೆ ಹೊರಗೆ ಒಂದು ವಾಕ್ ಹೋಗಬೇಕೆನ್ನುವ ಬಯಕೆ, ಆಕೆಯೊಂದಿಗೆ ಸಿನೆಮಾಗೆ ಹೋಗುವ ಬಯಕೆ, ಆಫೀಸಿನಲ್ಲಿದ್ದಾಗ ಫೋನಿನಲ್ಲಿ ಒಂದೆರೆಡು ಬಾರಿ ಮಾತನಾಡಬೇಕೆನ್ನುವ ಬಯಕೆ, ಹೀಗೆ ಏನೇನೋ ಅಪೇಕ್ಷೆಗಳು. ಅಪೇಕ್ಷೆಗಳಿಗೆಲ್ಲಾ ಜೀವ ಬರುವುದೆಂತು? ನನಗೀಗಲೂ ಇದು ಯಕ್ಷಪ್ರಶ್ನೆಯೇ! ನಾನೇಕೆ ಅಪೇಕ್ಷಿಸಬೇಕು? ಅಪೇಕ್ಷಿಸದೆಯೇ ಇರಬಹುದೇ?

ಇವೆಲ್ಲವನ್ನ ತಮಾಷೆಗೆ ಹೇಳಿದೆ. ತಮಾಷೆಯಾಗಿ ಕಂಡರೂ, ತಮಾಷೆಯಲ್ಲೂ ಅನುಭವವಿರಬಹುದು ಅಥವಾ ನಾನೇ ಎಲ್ಲವನ್ನೂ ತಮಾಷೆಯಾಗಿ ನೋಡುವುದನ್ನು ಅಭ್ಯಾಸ ಮಾಡಿಕೊಂಡಿರಬಹುದು. ನಾನು ಅಪೇಕ್ಷಿಸಿದಷ್ಟೂ, ನನಗೇ ಬೇಸರವುಂಟಾಗುವುದು. ಅವಳು ಅಪೇಕ್ಷಿಸಿದಷ್ಟೂ, ನನ್ನ ಸ್ವೇಚ್ಛೆ ಸಾಯುವುದು. ಆದರೂ ನಾನು ಆಕೆಯನ್ನು ಬಿಟ್ಟಿಲ್ಲ. ಅದು ಪ್ರೀತಿಯೋ, ಭಯವೋ ತಿಳಿಯದು. ಹಾಗೆಂದ ಮಾತ್ರಕ್ಕೆ ಅಪೇಕ್ಷಿಸಬಾರದೆ? ಇಲ್ಲ, ಅಪೇಕ್ಷಿಸಬಾರದೆಂದಲ್ಲ. ನಾನು ಅದಕ್ಕೆ ಅಪೇಕ್ಷೆಯೆನುವುದಿಲ್ಲ, ಭರವಸೆಯೆನ್ನುತ್ತೇನೆ. ಭರವಸೆಯಿರಲಿ, ಅಪೇಕ್ಷೆ ಬೇಡ. ಆಕೆ ನಿನ್ನ ಭಾವನೆಗಳಿಗೆ ಸ್ಪಂದಿಸಬೇಕೆತ್ತೆನುವ ಅಪೇಕ್ಷೆಗಿಂತ, ಸ್ಪಂದಿಸುವಳೆನುವ ಭರವಸೆಯಿರಲಿ. ಭರವಸೆ ನಿತ್ಯ ನಿರಂತರ. ಅದಕೆ ಸಾವಿಲ್ಲ. ಆದರೆ ಅಪೇಕ್ಷೆ, ಸತ್ತು ಮತ್ತೆ ಹುಟ್ಟುವುದು, ಹುಟ್ಟಿ ಮತ್ತೆ ಸಾಯುವುದು. ಈ ನಡುವೆ ಅದು ಫಲವನ್ನೀಯಬಹುದೇನೋ, ಆದರೆ ಅದರ ಸಂಭವನೀಯತೆ ಬಹಳ ಕಡಿಮೆ.

ನಿನ್ನಪ್ಪನೆನಿಸಿಕೊಂಡವ....

- ಯತಿರಾಜ್

ನಲ್ಮೆಯಾ ಓಲೆ

ಭಾವನೆಗಳನು ಪದದಲ್ಲಿ ತುಂಬಬಹುದೇ,
ಕಾಗದದ ಗೋಡೆಮೇಲೆ ಗೀಚಬಹುದೇ,

ನನ್ನೆದೆಯ ಮಾತಿಗೆ ದಾರಿ ಪತ್ರವಿರಬಹುದೇ,
ಸಂಪರ್ಕ ಸಾಧಿಸುವ ಮಿತ್ರನಾಗಬಹುದೇ,

ಕಲ್ಪನೆಯ ಮಾತಿಗೂ ಕಾಗದದ ಭಿತ್ತಿ....
ದೂರದ ಸಾಥಿಗೂ ಕನವರಿಕೆಯ ಬುತ್ತಿ...

ತಲುಪುವ ವೇಳೆಗೆ ಕಾತರದ ಕನಸು,
ಮರುಪತ್ರ ಬರದಿರಲು ಮನದೊಳಗೆ ಮುನಿಸು..

ಕಾಯುತ್ತಲೇ ಕಾದಿದೆ ಪತ್ರದಾ ಉತ್ತರಕೆ,
ಬೇಯುತ್ತಲೇ ಕೂತಿದೆ ಮೌನವು ಹತ್ತಿರಕೆ,

ಬಂದೇ ಬರುವುದು ನಲ್ಮೆಯಾ ಓಲೆ,
ತರುತಿದೆ ಖುಷಿಯನು ಈ ಸುಳ್ಳಿನಾ ಸಾಲೆ.

– ಸುದರ್ಶನ



ಪ್ರೀತಿ ಪೂಜ್ಯತೆಯ ಸೇತುವೆ

ಅಂತರಂಗದಲ್ಲಡಗಿದ ಭಾವನೆಗಳಿಗೆ ವೇದಿಕೆಯು ನೀನು
ಕಷ್ಟ ಸುಖಗಳ ವಿನಿಮಯಕ್ಕೆ ಕಲ್ಪವೃಕ್ಷವೂ ನೀನು
ಬೃಹತ್ ಬಂಧನಕ್ಕೆ ಬಿಡಿಸಲಾಗದ ಬೇಡಿಯು ನೀನು
ಕ್ಷಣ ಕ್ಷಣಕ್ಕೂ ಮನ ಮಿಡಿಸುವ ಕರುಣಾಳು ನೀನು
ತಾಯಿ–ಮಗನ ಮಮತೆಯ ಪ್ರೀತಿಗೆ ಪಾತ್ರವು ನೀನು
ತಂದೆ–ಮಗಳ ಪೋಷಣೆ ಪ್ರೀತಿಗೆ ಪಾತ್ರವು ನೀನು
ಅಣ್ಣ–ತಂಗಿಯ ಸಹೋದರತ್ವದ ಸಂಕೇತೆ ರಕ್ಷಾ ಬಂಧನವು ನೀನು
ಗುರು–ಶಿಷ್ಯರ ಭಕ್ತಿ ಬಾಂಧವ್ಯದ ದ್ಯೋತಕವು ನೀನು
ಪ್ರೀಯತಮ–ಪ್ರೀಯತಮೆಯ ಪ್ರೀತಿ ಪೂಜ್ಯತೆಯು ಸೆತುವೆಯು ನೀನು
ಆತ್ಮೀಯ ಗೆಳೆತನದ ಗಟ್ಟಿತನಕ್ಕೆ ಸೆಳೆತವು ನೀನು, ಸಮ್ಮೀಳಿತವು ನೀನು
ಬಾವನೆಗಳ ಬಿತ್ತನೆಯ ಹಂದರಕ್ಕೆ ನೀ ಸುಂದರ
ಬಂಧುತ್ವಗಳ ಬೆಸುಗೆಗೆ ನೀ ಮೂಲಾಧಾರ
ಪ್ರೀತಿ–ಪ್ರೇಮಕ್ಕೆ ನೀ ಚಲುವಿನ ಚಿತ್ತಾರ
ಕರುಣೆ ವಾತ್ಸಲ್ಯಕ್ಕೆ ನೀ ಮನ್ವಂತರ
ಬದುಕು–ಬವಣೆಗಳಿಗೆ ನೀ ಸಾಹುಕಾರ
ಹುಟ್ಟು–ಸಾವುಗಳಿಗೆ ನೀ ಸದಾ ಸಾರಥಿ ಸಂಚಾರ
ನಿನ್ನ ಹೇಸರೆ ಹಳಸದ, ಹೊಳಪಿನ, ಹೃದಯದ, "ಪ(ವಿ)ತ್ರ "...
ಪತ್ರ– ಪವಿತ್ರ, ಪರಿಶುದ್ಧ, ಮಧುರ, ಅವಿನಾಭಾವ, ಭಾವಾಂಕುರ, ಅಜರಾಮರ,

– ರಮೇಶ ಕುಮಾರ ಡಿ ಬಡಿಗೇರ

To,

BAYALU,
Azim Premji Foundation,
12th July, 2016.

Dear Bayalu,

Every issue of BAYALU has a different flavor and when the 47th issue announced with the theme "Letters" I immediately remembered my school days when we were taught about letters and the format of addressing, punctuation, body, concluding salutations etc. All of that was part of language development and marks awarding in the final exam. Lest at that age I had the idea that the letters form lasting memories in our minds and hearts.

Letters written or received at different span of the life have different intentions and purposeful meaning. Letters from parents, siblings, spouse, children, employers etc. have different tone and intensity which we all gauge as needed. I was lucky enough to be with my parents all through my education years but after marriage when moved on to USA I had the urge to write, receive, waiting for letters from my parents and vice versa. At that point of time email was not a common thing and my parents did not know the method of emailing. Till date I preserved all those precious hand written letters including all the employment letters, appreciation letters, thank you letters etc. and even my parents have preserved them.

Every year when in the cleaning process of the house I always dust the files of letters and again retain them intact, the color of the paper has faded, the ink has blotted but my memories have not worn out. Waiting for the letter, reading it again and again over and over was all part of my even becoming nostalgic when penning down this letter. When looking at the old letters it seems even my hand writing has changed from what I had 20 years back to what I have now, my parents and my daughters are the critics of my hand writing comparing it with the old letters that I had written.

I take this opportunity to thank BAYALU for kindling my memories down the lane of my experience with the hand written letters I possess and letters that I have written till date.

Truly,
Your regular follower
Rama
B. Rama Devi
Medak ECE Initiative

The Woman And I

(To my daughter who is getting married)



We had a long talk over a cup of tea
The cup in the hand and the sip in between was neither felt nor seen by us.
It was a time when the time seemed still and infinite.

Just before we sat across a round dining table
We were unknown to each other.
The beauty of the earthlike round table in between us
Never disappeared from my memory association with her.

Before the sitting we were walking beside each other unknown
Towards the guest house by chance.
It was an evening when dark had set in on the land
While dusk was still in the sky.

We could hardly see each other in the face
Shy of our feelings and a warming warming us.
Not possible to see because
There were trees which had already become dark
And it added darkness to the place around.

I saw her looking at the sky
My eyes too reached to some bats flying high in the sky going
To some destination far away through the coconut trees over our heads
And some chikku around us in the farm land.

And a lot of things became alive between us that instant
Like the stars to be appeared in the distant sky
Twinkling started in our minds seeing the bats flying against the twilight of the sky.

My eyes returned to see her gazing
I saw in the patches of light through the tree holes falling
She had the eyes of a child in her face
Moving, feeling and twinkling.

She had plaited her flying disheveled hair
Like a careless passionate youth
And her shoulders were that of a grown up with rounding of lovely fat.

When she told her name was Dharini
My breathe was about to stuck down my throat
And then with the breathe of the woman I breathed
I listened with her ears
I smelled with her nose
And the blood running through her veins became mine!

Whom was I feeling
The woman or the earth? Ah, the life of life.
Then the sitting across the round earth table and the talking in whispers never ended!
The still and the moving becoming one in being still and in moving.

- ***Ramakrishna***

Are you ready for marriage?

Congratulations!

I know it was not easy for you to get married, though people say that it is easy to get married. What they say is, 'Yes, it is easy to get married but, staying married is difficult'. In fact, it should not be difficult for two people who love each other to be happily married, married to love and each other. But, somehow that is not as simple and as easy as we think.

What does it take to be a happily married couple? It takes a lot of things. It takes away your freedom. Kutch paakar kona hai, kutch kokar paana hai… you might feel that this is a very exaggerated statement. Please rethink. It is not said in a negative way. It is true that now, you are bonded to another person and in all your decisions and actions you have your partner's say. This is very important. This communication for consensus is what makes or breaks the relationship. Can we and do we want to make our spouse our true partner? In decisions, in actions, in thinking ….. In everything!

Till now, we were self-centered people. Self-centered from this angle that we had to think about ourselves. Now, we will have to think about our partner all the time. This thinking is continuous 24x7! Can we do that, thinking about our spouse all the time? The power comes from decision making. Can we share this DECISION taking power with our spouse? This means giving away the 50% of our power. Are we ready for that? This sharing of the power is very important for a conflict free happy married life.

It is LIVING with another person! This becomes clearer as we move forward in married life. In the initial stage or phase since both of us are putting our best part forward we feel it is nice but, as days progress, we become ourselves and our personality comes through. Now, it is not two body and one soul. We start understanding that it is two bodies and two souls. Living together. Not easy. We cannot tolerate sleeping with a stranger in a sleeper bus for few hours. There is such a lot of tolerance, adjustment, letting go in this process. The difference between a friend and your spouse is that with a friend, it is your choice to be or not. But not in a marriage. So the whole process is to understand, accept, like, love, tolerate and adjust. This is what marriage teaches us. To live with the other person. Acceptance is the first step and a major step. We know that this problem gets compounded when we have people who have difficulty in accepting themselves. Can you accept your partner as he or she is?

Marriage teaches us patience, marriage teaches us to wait before you conclude. It shows us that jumping to conclusions leads to disaster. Can we talk less and listen more. This will help us in being together. Can we think twice before we speak? Can we suspend judgment? Can we practice non-judgmental attitude. Not so easy words to understand and to practice it is very difficult. But, the fruit of all these efforts is very sweet in marriage and you need not wait for years for the fruit. The returns are immediate!

We are complex people in a complicated world. Can we make things simpler? Being simple is not easy. You have to let go many things. Can we make our surroundings simple? This simple living helps in building a simple world around you which is the root of happiness! Can we make a difference between moral and value? Can we keep the moral aside and stay just with a few agreed values. Difficult decisions. But will lessen your burden to a large extent.

The great philosopher poet, Khalil Gibran has written that relationship is like a glass. Normally the breaking of a glass is attributed to an external object or external force. He says the external object or force can break a glass easily only when there is a crack in the glass itself. This I feel is the core of any marriage. The force of this entire world cannot separate you both if you love each other and have decided to stay together.

Believe me, there is NO one formula for a happy married life. All happy couple have undergone all kinds of experiences and emotions. Some good, some bad and some ugly. What they say is very simple things which is too simple for a complex relationship of this kind which brings together body mind and spirit! Accept, Listen, understand, share, care, forgive, forget, forgo … is what these successful couples say. But, I felt the most important thing that all of them repeat is to respect the partner. Without love and respect there is no dignified life. Can you genuinely respect your partner? This is true not only for you who are just married or in the verge of getting married, it holds true to a happily married couple for ages or for that matter any relationships.

So my friends, for your marriage many might have helped. But, to be happily married you will have to invest yourselves. I do not feel anybody can help beyond a point. You have got a great person, accept that person, understand that person, share, care, sacrifice for that person and make this a beautiful relationship. Explore each other and this world together. Wish you a happy and meaningful journey together!

With love,
Peri



A Letter to the Almighty…

Lord Almighty…

My Salutations to you…

I am indebted to you for bringing me in to this world and for giving me the company of so many wonderful people all around me, without whom I cannot imagine to live happily and be where I am today. I am indebted to you for giving me all sorts of experiences which have made my life interesting – sometimes to me and sometimes to people who matter to me. I am indebted to you for those experiences because they have made me smarter and stronger than ever before.

I am indebted to you for giving me such wonderful parents who have selflessly cared for me, nourished me, fulfilled my wishes, sacrificed their desires for me, patiently borne my follies and foibles, allowed me so much space and time to search and understand myself, trusted me and most importantly stood by me in all my moments of adversity. I am so grateful to you for giving me such wonderful parents and I beg of you to give me all the strength and wisdom to keep them happy and contented always.

I am indebted to you for giving me wonderful teachers – both in the school and in the society. These teachers have taught me everything that I may have possibly learnt in life and which has made me whatever I am today. I beg of you to keep all my teachers happy and reward them with riches because I believe no one in this world can really repay a teacher. So only you – the Omnipotent One can reward them suitably.

I am indebted to you for giving me wonderful friends who have always treated me with utmost love and respect. I am honored to have them and be among them and grateful to them for accepting a mediocre creature like me in to their fold. Their greatness lies in making people like me feel great. I beg of you to fulfil their just desires and always keep them on the right path, free from wants and cares.

I am indebted to you for giving me a wonderful world to live in with all the above people and all the trees, forests and living beings. I am indebted to you for giving me an opportunity for visiting beautiful places I had never dreamt of visiting.

I am indebted to you for forgiving my misgivings and curing my ailments and those of my near and dear ones and giving us all a chance to do something better again and again.

I ask your pardon for misunderstanding you so many times. Every time I faced a setback, every time I was sad or dissatisfied or hurt, I thought you are being unjust to me. But, I have now realized that there are many more people whose suffering is much more than I can imagine or bear. I beg of you to alleviate their needs, wants, cares, concerns and suffering and grant them happiness.

I request you to "Reform this world, beginning with me".

Your errant child…

Rajesh S Mahantmath
Fellow, Kalaburgi DI.
7899824878

ಸವಿ ನೆನಪಿನ ನವಿಲುಗರಿಗಳು !!!

ಎದೆಯ ತಿತ್ತಿಗಳೆಲ್ಲಾ ಹೂವಾಗಿ ಮಘಮಘಿಸಿ,
ಮಡಕೆ ಮಡಕೆಗಳಾಗಿ ಬೆಚ್ಚನೆ ಮಲಗಿವೆ,
ಹಳೆಯ ಮುರುಕಲು ಕಬ್ಬಿಣದ ಪೆಟ್ಟಿಗೆಯಲಿ
ಬಾಳಿನಂಗಳದ ಅವಶೇಷಗಳಂತೆ ಕಾಡುತ್ತಿವೆ,
ಅಂದು ನಾ ಬರೆಬರೆದು ಹಗುರಾದ ಪತ್ರಗಳೆಂಬ ತುಷಾರದ
ಹನಿಗಳು !!
ಭಾವತೀರಯಾನದ ಅಮೃತಘಳಿಗೆಗಳಿಗಾಗಿ.

ಒಂದರೊಳಗೊಂದೊಂದು ನವನವೀನ ಕಥೆ, ಕವನ,
ಕಾದಂಬರಿ
ನವುರಾದ ಲಹರಿಗಳ ಭಾವ ಸಿಂಚನ–ಜೀವ ಸ್ಪಂದನ
ಕತ್ತಲೆಯ ಗರ್ಭ ಸೀಳುವ ದೀವಟಿಗೆಯ ಹೊಂಬೆಳಕಿನಂತೆ,
ಬೋಧಿವೃಕ್ಷದಡಿಯ ಜ್ಞಾನೋದಯದ
ಶಾಖೋಪಶಾಖೆಗಳಂತೆ,
ಅಲ್ಲಿದೆ ಕಣ್ಣೀರ ಕರೆ; ಪ್ರೀತಿಯ ಬಿಸಿಯುಸಿರು,
ಪಶ್ಚಾತಾಪದ ನಿಟ್ಟುಸಿರು ; ನಗುವಿನೊರತೆಗಳ ಕಾರಂಜಿ
ನಡೆದ ದಾರಿಯ ಹಿನ್ನೋಟ; ಕಳೆದ ದಿನಗಳ ಮೆಲುಕಾಟ
ಭವಿತವ್ಯದ ನಿರೀಕ್ಷೆಯಲಿ ಹುಚ್ಚುಕೋಡಿ ಮನಸ್ಸಿನ
ನಾಗಾಲೋಟ,
ಈಗೊಮ್ಮೆ ತೆರೆದು ನೋಡಿದರೆ ಅನಾಮಿಕನೊಬ್ಬನ
ಅತ್ಮಚರಿತ್ರೆಯ ಪುಟಗಳು !!

ಪ್ರತಿಬಿಂಬವಿದೆಯಲ್ಲಿ ; ಗತಿಬಿಂಬವೂ ಇದೆಯಲ್ಲಿ
ಸವಿನೆನಪುಗಳ ನವಿಲುಗರಿ ಹರಡಿವೆಯಲ್ಲಿ ಪಕಳೆಪಕಳೆಗಳಾಗಿ.

ಆತ್ಮಾವಲೋಕನಕಲ್ಲಿದೆ ನೋಡಿ ದಣಿವರಿಯದ ಹೆದ್ದಾರಿ,
ಮನಸು ಮನಸುಗಳ ಪಿಸುಮಾತಿಗೊಂದು ಕವಲುದಾರಿ,
ಖಾಸಗಿ ಕ್ಷಣಗಳ ಈ ಶತಪಥಗಳಲಿ ನನ್ನದೇ ರಾಜ
ಮೆರವಣಿಗೆಯ ಜಂಭೂಸವಾರಿ,
ಯಾರಿಗುಂಟು ಯಾರಿಗಿಲ್ಲ ಈ ಹಸಿಬಿಸಿ ಖುಷಿಗಳ ತರಹೇವಾರಿ ಕಾಲುದಾರಿ !!!

ತದುಕಿ, ಕೆಣಕಿ, ಕೆದಕಿ, ಬೆದಕಿ
ಕೂಡಿಟ್ಟ ಹುಡಿಮಡಿ ಅನುಭವದ ಬುತ್ತಿತುತ್ತುಗಳ
ಮುತ್ತುಗಳನಾಯ್ದಂತೆ ಕಲಸುತ್ತಿದ್ದೇನೆ,
ನನ್ನೊಳಗಿನ ಬೆರಗು ಪ್ರಪಂಚಕೆ ನಾನೇ ವೀಕ್ಷಕನಾಗುತ್ತಿದ್ದೇನೆ,
ಅದರೊಳಗಿನ ನೂರ್ಬಣ್ಣಕೆ ಮಾರುಹೋಗುತ್ತಿದ್ದೇನೆ,
ಮುಗಿಯದ ಮುಸಲಯುದ್ಧದ ದೊಂಬರಾಟಕೆ ಸಾಕ್ಷಿಯಾಗುತ್ತಿದ್ದೇನೆ,
ಶ್ರುತಿ ಮಾಡಿದ ವೀಣೆಯಂತೆ ಹೊಸ ಹಾಡಿನ ನಿರೀಕ್ಷೆಗಳಿಗೆ ಪಲ್ಲವಿಯಾಗುತ್ತಿದ್ದೇನೆ !!!!

- ರಾಘವೇಂದ್ರ ಹೇರ್ಳೆ ಜಿ.

ಮನದಾಳದ ಮಾತು

ರಿಗೆ,

ಪಾಯಲ್

ವಿಜಯನಗರದ ಬೀದಿ ಬೀದಿ ಗಲ್ಲಿ ಗಲ್ಲಿ ಸುತ್ತಿದರೂ ನಿನ್ನ ಗೆಜ್ಜೆಯ ನಾದ ನನ್ನನ್ನು ಓ.. ಎಂದು ಕೂಗಿ ಕರೆಯುವ ಸದ್ದು ಮಿಂಚಂತೆ ಸೆಳೆಯುವ ನಿನ್ನ ಕಣ್ಣೋಟ, ಕಣ್ ಕಾಡಿಗೆ, ನಡೆಯುವ ವೇಗಕ್ಕೆ ಕಿವಿಗೆ ಬಂದಪ್ಪಳಿಸುತ್ತಿದ್ದ ಬಳೆಗಳ ಹಾರ್ಮೋನಿಯಂ ಸುಗಮ ಸಂಗೀತ, ಹೆಜ್ಜೆಗೆ ಹೆಜ್ಜೆಯಾಗಿ, ಧನಿಗೆ ಧನಿಯಾಗಿ ರಾಗಕ್ಕೆ ತಾಳವಾಗಿ ಓಡಾಡುತಿದ್ದ ಆ ಬೀದಿಯಲ್ಲಿ ನಮ್ಮದೆ ದರ್ಬಾರು, ನಾನೇ ರಾಜ ನೀನೆ ರಾಣಿ ಗಿಜಿಗುಡುತಿದ್ದ ಜನರ ವ್ಯಾವಹಾರಿಕ ಸದ್ದಿನಲ್ಲಿ ಇಬ್ಬರ ಪಿಸುಮಾತು ಯಾರಿಗೂ ಕೇಳುತ್ತಿರಲಿಲ್ಲ ನಮ್ಮದೆ ಲೋಕ ಅದೊಂದು ಅದ್ಭುತ ಮಾಯಾ ಪ್ರೇಮ ಲೋಕ ಇದರ ಬಲೆಯಲ್ಲಿ ಬಿದ್ದ ಇಬ್ಬರೂ ಒಬ್ಬರನೊಬ್ಬರು ಅಗಲಿ ಬದುಕಲಾರದಷ್ಟು! ಉಗುಳಿನ ನಾಲಗೆಯಂತೆ ಬಂದಿಯಾಗಿದ್ದೆವು ಆದರೆ ಪಾಪಿ ದುನಿಯಾದಲ್ಲಿ ಬದುಕುವ ಹಕ್ಕಿಗಳಿಗೆ ಕಲ್ಲು ಹೊಡೆಯುವವರೆ ಹೆಚ್ಚು, ವಿಷವನ್ನು ಕಾರುತ್ತಾರೆ ನನ್ನಿಯ ನುಡಿದು ಅಗಲಿಸುತ್ತಾರೆ ಇದ್ದರೆ ಕಣ್ಣುರಿ ಹೋದರೆ ಹೊಟ್ಟೆಯುರಿ ಬಾಯ್ ಬಡಿಯುವ ಸಮಾಜದಲ್ಲಿ ಅಷ್ಟು ದಿನ ಏಸೊಂದು ಸ್ವತಂತ್ರವಾಗಿ ಹಾರಾಡಿದೆವು, ನನ್ನಲ್ಲಿ ನೀನು ನಿನ್ನಲಿ ನಾನು ರೆಕ್ಕೆ ಎರೆಡು ದೇಹ ಒಂದು, ಗರಿ ಬಿಚ್ಚಿ ಮೇಲೆ ಹಾರುವುದೇ ತಡ ಬಡಿತದ ವೇಗ ಇದ್ದಕ್ಕಿದಂತೆ ಹೆಚ್ಚಾಗುತಿತ್ತು. ತೇಲುತ್ತಾ ತೇಲುತ್ತಾ ಮೈಮರೆಯುತಿದ್ದೆವು ಯಾರು ಇಲ್ಲದ ಆ ಲೋಕದಲ್ಲಿ.

ಇಬ್ಬರ ಪರಿಚಯ ಯಾರಿಗೂ ತಿಳಿಯದ ರೀತಿಯಲ್ಲಿ ಆಗಿದೆ ಫೋನಿನ ಕರೆಯೋ ಇಬ್ಬರ ಬೆಸುಗೆಯೋ ಅಂದು ರಿಂಗಾಗಿ ಮಿಸ್ಡ್‌ಕಾಲಾದ ನಿನ್ನ ನಂಬರ್ ಹೃದಯಕ್ಕೆ ಬಡಿದ ಬಂದು ಸದ್ದಾಗಿತ್ತು ಮತ್ತೆ ಹಿಂದುರಿಗಿ ನಿನಗೆ ಕರೆ ಮಾಡಿದಾಗ ಮತ್ತೊಂದು ಬಡಿತ ಸೇರಿಕೊಂಡಿತು ದಿನಾ ನಿನ್ನೊಂದಿಗೆ ಮಾತಿಗೆ ಮಾತು ಬೆರೆತು ನಿನ್ನ ಪ್ರತಿಕ್ರಿಯೆಗೆ ಅನುಗುಣವಾಗಿ ಶಬ್ದ ಅದರ ವೇಗ ಒಟ್ಟಿಗೆ ಚಲಿಸುತ್ತಾ ಸಾಗಿದವು ಹತ್ತು, ಐವತ್ತು, ಎಪ್ಪತ್ತು ನೂರರ ಸಮೀಪ ಬಂದು ನಿಂತಿದೆ ಪ್ರತಿ ಬಡಿತದಲ್ಲೂ ನಿನ್ನ ಹೆಸರು ಯಾರಿಗೂ ಕೇಳಿಸದು, ನಾನು ನನ್ನ ಮನಸ್ಸು ಇವೆರಡರ ನಡುವೆಯೆ ಹನಿಗೆ ಹನಿ ಸೇರುತ್ತಾ ಹೋಯಿತು. ಬಹಳ ಬೇಗ ತುಂಬಿದ ಡ್ಯಾಂ ಯಾವಾಗ ಹೊಡೆಯುತ್ತದೆಯೋ! ಎಂದು ಕಾತರದಿಂದ ಕಾಯುತಿದ್ದವನಿಗೆ ಮಿಂಚಾಗಿ ಬಂದೆ ಮಬ್ಬಾದ ಮುಖವನ್ನು ಗಮನಿಸುತ್ತಾ ಒಳಗಿನ ಪ್ರಸವ ವೇದನೆಯನ್ನು ನಿನ್ನಡಿ ಬಿಚ್ಚಿಟ್ಟೆ ನಿನ್ನಲೂ ಆ ಭಾವನೆ ಉದ್ಭವಿಸಿದೆ ಎಂದು ತಿಳಿದು. ಧರ್ಮ, ಜಾತಿ, ಕೇರಿಯ ಅಡೆತಡೆ ಇಲ್ಲದೆ ಎಲ್ಲರನ್ನು ಮರೆತು ಕೈ ಚಾಚಿ ಬಿಗಿದಪ್ಪಿದೆ ಇಬ್ಬರದು ನಿಶ್ಚಲ ಮನಸ್ಸು ರಂಗಿನ ಓಕುಳಿಯಲ್ಲಿ ಬಿದ್ದು ಕೇಕೆಯಾಕಿದೆ ನಿರ್ಮಲ ಪ್ರೇಮದ ಬಿಸಿ ಅಪ್ಪುಗೆಯ ನಡುವೆ, ಸುಳಿಯಲಿಲ್ಲ ಕಾಮದ ವಾಸನೆ ಅಲ್ಲಿದದ್ದು ಒಂದೇ ಮನಸ್ಸಿನ ಮಾತು ಕಲ್ಮಶವಿಲ್ಲದ ಹಸಿ ಹೃದಯಗಳ ಬಂಧನ.

ಜಗತ್ತನು ಮೀರಿಸುವ ಹಂಬಲ ಇಬ್ಬರಲ್ಲೂ ಬೆಳೆಯಿತು ಏನೆ ಆಗಲಿ ನಮ್ಮ ಪ್ರೀತಿಯನ್ನು ಪಡೆದೇ ಪಡೆಯುತ್ತೇವೆ ಎಂಬ ನಂಬಿಕೆಯ ಆಶ್ವಾಸನೆಗಳು ಇಬ್ಬರಲ್ಲೂ ಬೇರೂರ ತೊಡಗಿದವು ಏಕೆಂದರೆ ನಂಬಿಕೆ ದೊಡ್ಡದು ಇಡೀ ಜಗತ್ತು ನಿಂತಿರುವುದೆ ನಂಬಿಕೆಯ ಮೇಲೆ ಪೀತಿಯಲ್ಲಿ ನಂಬಿಕೆ ಬಹಳ ದೊಡ್ಡದು ಎಂದು ಸಾರಿ ಸಾರಿ ಕೂಗಿ ಕೂಗಿ ಹೇಳುತಿದ್ದವಳು ನೀನು. ನಿನ್ನ ಕೇಶರಾಶಿಯ ನಡುವೆ ಕವಲು ದಾರಿಯಾದೆ ದಿನಕ್ಕೊಂದು ಕನಸ್ಸು, ಅದರಲ್ಲಿ ನನ್ನ ನಿನ್ನ ಪ್ರೇಮ ಗೀತೆ ಬಿದ್ದ ಕನಸ್ಸುಗಳನ್ನು ಹೆಕ್ಕಿ ಮುಂಜಾನೆ ಮಾತನಾಡುತಿದ್ದೇವು. ನನಗಿಂತ ಹೆಚ್ಚು ಕನಸ್ಸು ಕಾಣುತಿದ್ದವಳು ನೀನು. ನೀನೆ ಹೇಳಿದ ಒಂದು ಮಾತು ಕನಸ್ಸಿಗೆ ಕೊನೆಇಲ್ಲ ಆದರೆ ನನಸಾಗದ ಕೋಟಿ ಕನಸ್ಸುಗಳನ್ನು ಕಂಡರು ಏನೂ ಪ್ರಯೋಜನವಿಲ್ಲ. ನನಸ್ಸಾಗುವ ಒಂದೇ ಒಂದು ಕನಸ್ಸು ಸಾಕು ಎಂದು ನನ್ನನ್ನು ಸಮಾಧಾನಪಡಿಸುತ್ತಿದ್ದೆ. ನನ್ನ ತಾಯಿಯ ಪರಿಸ್ಥಿತಿಯನ್ನು ನಿನ್ನ ಜೊತೆ ತೋಡಿಕೊಂಡಾಗ ನನಗೆ ಸಾಂತ್ವಾನ ಹೇಳಿದೆ ತಾಯಿಗಿಂತ ಮಿಗಿಲಾದದು ಯಾವುದೂ ಇಲ್ಲ ಎಂದು ಪದೇ ಪದೇ ಹೇಳುತಿದ್ದೆ. ಉತ್ತಮ ಸ್ನೇಹಿತೆಯಾಗಿ, ಒಳ್ಳೆ ಹಿತೈಷಿಯಾಗಿ, ಬಂಧುವಾಗಿ, ಎಲ್ಲಕ್ಕಿಂತ ಹೆಚ್ಚು ಕಲ್ಮಶವಿಲ್ಲದ ಹೃದಯೀ ಪ್ರೇಮಿಯಾಗಿ ನನ್ನ ಬದುಕಿನ ಅಂಗವಾದೆ. ಕಾಲೇಜಿನ ಪ್ರಾರಂಭದ ದಿನ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮ ಇದರ ಹಿಂದಿನ ದಿವಸ ನನಗೆ ಕರೆ ಮಾಡಿ ಕಾರ್ಯಕ್ರಮಕ್ಕೆ ಬರುವಂತೆ ಹೇಳಿದಾಗ ನಾನು ಬರುವುದಿಲ್ಲ ನನಗೆ ಭಯವಾಗುತ್ತದೆ ಎಂದು ಹೇಳಿದೆ ಇಲ್ಲ ನೀನು ಬರಲೇಬೇಕು ಎಂದು ಹಠ ಮಾಡಿದೆ ನಿನ್ನ ಹಠಕ್ಕೆ ಮನಸೋತು ಬರುವೆನೆಂದೆ ಹೆಳಿದೆ. ಮುಂಜಾನೆ ಬರುವ ತಯಾರಿಯಲ್ಲಿ ನಿನದೇ ನೆನಪು, ಹೇಗಿರುವೆ? ನೀನು, ನಿನ್ನ ರೂಪವೆಂತಹುದು ಎಂದು ಯೋಚಿಸುತ್ತಾ ಬಸ್ಸನೇರಿದೆ. ನಮ್ಮ ಪ್ರೀತಿ ಶುರುವಾಗಿ ಒಂದು ತಿಂಗಳಾದರು ಇಲ್ಲಿಯ ತನಕ ನಿನ್ನನ್ನು ನೋಡದ ಮನಸ್ಸು ಇಂದೇಕೊ ತಡವರಿಸುತ್ತಿದೆ ಕಾತರಿಸುತ್ತಿದೆ ನೋಡುವ ಹಂಬಲ ಹೆಚ್ಚಾಗುತ್ತಿದೆ. ಫೋನಿನಲ್ಲೆ ನಮ್ಮಿಬ್ಬರ ಪ್ರೀತಿ ಹೃದಯ ಮುಟ್ಟಿತು ನೋಡದೆಯೇ ಪ್ರೀತಿಸಿದೆವು ಕನಸ್ಸುಗಳನ್ನು ಕಂಡೆವು. ಕಾಲೇಜು ಸಮೀಪಿಸುತಿದ್ದಂತೆ ನನ್ನೆದೆ ಬಡಿದುಕೊಳ್ಳಲು ಪಾರಂಭಿಸಿತು ಮೊದಲ ಸಲ ನಿನ್ನನ್ನು ಮುಖಾ ಮುಖಿಯಾಗಿ ಭೇಟಿಯಾಗುವ ಸಂದರ್ಭ ಒಂದೆಡೆ ಹರ್ಷ ಮತ್ತೊಂದೆಡೆ ಭಯ, ಕಾತರ ತಳಮಳ ಎಲ್ಲವೂ ಒಟ್ಟಿಗೆ ಬಂದೆನ್ನ ಎರಗಿದವು. ಬಸ್ಸನ್ನಿಳಿದು ಮೆಲ್ಲನೆ ಕಾಲೆಳೆಯುತ್ತಾ ಕಾಲೇಜಿನ ಕಡೆ ನಡೆಯುತ್ತಾ ಬಂದೆ. ನೀನು ಕುಳಿತ ಕ್ಲಾಸಿನಲ್ಲಿ ಗದ್ದಲ್ಲವೋ ಗದ್ದಲ ಹಾಡು, ಡ್ಯಾನ್ಸು, ನಾಟಕ ಎಲ್ಲರನ್ನು ರಂಜಿಸುತಿದ್ದವು ಇವುಗಳ ನಡುವೆ ನಿನ್ನ ಹುಡುಕಾಟ ಹೊರಗಡೆ ಕಿಟಕಿಯಿಂದ ಇಣುಕಿ ನೋಡಿದೆ ಸುತ್ತಲೂ ಕಣ್ಣಾಡಿಸಿದೆ ನಿನ್ನ ರೂಪವನ್ನು ಕಲ್ಪಿಸಿಕೊಂಡು ಒಂದು ಹುಡುಗಿಯ ನಂತರ ಮತ್ತೊಂದು ಹುಡುಗಿಯನ್ನು ನೋಡತೊಡಗಿದೆ ಆದರೂ ನೀನು ನನಗೆ ಗುರುತು ಸಿಗಲಿಲ್ಲ ನಿನ್ನನ್ನು ಕಲ್ಪಸಿಕೊಳ್ಳಲೂ ಸಾಧ್ಯವಾಗಲಿಲ್ಲ. ನಿನ್ನ ಧನಿಗಾಗಿ ನನ್ನೆರೆಡು ಕಿವಿಗಳನ್ನು ಬಬ್ಬಲ್ಲು ಗಮ್ಮಿನಂತೆ ಎಳೆದು ಆಲಿಸತೊಡಗಿದೆ ಫೋನಿನಲ್ಲಿ ಕೇಳಿದ ನಿನ್ನ ಧನಿಯನ್ನು ನೆನೆದು, ಆದರೂ ಅದರ ನೈಜ ಧನಿಯನ್ನು ಕೇಳಲು ಸಾಧ್ಯವಾಗಲಿಲ್ಲ.

ಮದ್ಯಾಹ್ನದ ಸಮಯವಾಯಿತು ಎಲ್ಲರೂ ಊಟಕ್ಕೆ ತೆರಳಿದರು ಊಟ ಮಾಡುವ ಮನಸ್ಸಿಲ್ಲದೆ ಹೇಳಿಕೊಳ್ಳಲಾರದ ಏನೋ ಒಂದು ರೀತಿಯ ಛಾಯೆ ನನ್ನಲ್ಲಿ ಗೋಚರಿಸಿತು. ನಿನಗೆ ಕರೆ ಮಾಡಿದೆ ಆದರೆ ನೀನು ಕರೆಗಳನ್ನು ಸ್ವೀಕರಿಸಲಿಲ್ಲ ಮೇಲಿಂದ ಮೇಲೆ ಕರೆ ಮಾಡುತ್ತಲೇ ಇದ್ದೆ ನೀವು ಕರೆ ಮಾಡುತ್ತಿರುವ ಚಂದಾದಾರರು ನಿಮ್ಮ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂಬ ಹಿಮ್ಮಾಹಿತಿಯಷ್ಟೆ ಕೇಳುತ್ತಿತ್ತು, ಆದರೆ ನಿನ್ನ ಧನಿಯನ್ನು ಕೇಳಲು ನನ್ನ ಕಿವಿಯ ತಮಟೆಗಳು ಕಾತರಿಸುತಿದ್ದವು. ನನಗೆ ಅರಿವಿಲ್ಲದೆಯೇ ನಿನ್ನನ್ನು ತುಂಬಾ ಪ್ರೀತಿಸಿದೆ ಹತಾಶನಾದರೂ ನಿನ್ನ ಪ್ರೀತಿಯ ಮುಂದೆ ಅದು ದೂರ ಸರಿಯುತ್ತಿತ್ತು ಒಂದು ತಿಂಗಳ ಫೋನಿನ ಪ್ರೀತಿ ನನ್ನನ್ನು ಮಂತ್ರ ಮುಗ್ದನನ್ನಾಗಿಸಿತು. ನಿನಗಾಗಿ ಓಡೋಡಿ ಬಂದವನು

ಕೈ ಸೋತು ಹಿಂದಿರುಗಲು ಸಿದ್ಧನಾದೆ ಮರಳುಗಾಡಿನಲ್ಲಿ ನಡೆಯುತ್ತಾ ಹೋದವನಿಗೆ ಬಾಯಾರಿಕೆ ಹೆಚ್ಚಾದಾಗ ಸಿಕ್ಕ ಓಯಾಸೀಸಿನಂತೆ ನಿನ್ನ ಕರೆ ಹಿಂದಿರುಗಿ ಬಂತು. ಗೆಳತಿ ಅಂದು ನಮ್ಮಿಬ್ಬರ ಮೊದಲ ಭೇಟಿ ಜೀವನದಲ್ಲಿ ಮೊದಲ ಪ್ರೀತಿಯ ಹುಡುಗಿಯನ್ನು ನೋಡಿದ ಭಾಗ್ಯವಂತ ನಾನು ನಿನ್ನ ರೂಪವನ್ನು ವರ್ಣಿಸಲು ಪದಗಳ ಹುಡುಕುತಿದ್ದೇನೆ..

ಮನದಾಳದ ಮಾತುಗಳನ್ನು ಹಂಚಿಕೊಳ್ಳುವಷ್ಟರಲ್ಲಿ ಪತ್ರದ ಬರವಣಿಗೆಯ ಜಾಗ ಮುಗಿದಿದೆ ಗೆಳತಿ ಎದೆಯ ತುಂಬ ತುಂಬಿಕೊಂಡ ಭಾವನೆ, ನೋವುಗಳನ್ನು ನಿನ್ನ ಜೊತೆ ಹಂಚಿಕೊಳ್ಳಲು ನನ್ನ ಮನಸ್ಸು ಕಾತರಿಸುತ್ತಿದೆ. ಪೀತಿಯ ಆ ದಿನಗಳು, ವಿರಹದ ವೇದನೆ ಸತ್ತು ಬದುಕಿದ ಕ್ಷಣ, ತಿರುಗಾಟ ನಿನಗಾಗಿ ಹುಡುಕಾಟ, ಕೊನೆಗೆ ನಿಂತಿರುವುದು ತ್ಯಾಗದ ಸಂಕೇತವಾಗಿ ನಮ್ಮಿಬ್ಬರ ಪ್ರೀತಿ, ಅಮ್ಮನ ನೆನಪು..

ಇಂತಿ ನಮ್ಮಿಬ್ಬರ ಪ್ರೀತಿ.
ಅನಾಮಿಕ

To,
Community of Gorkhas,

Dear Sir,

In India and abroad, it has been heard and experienced that physical /manual labour is always underpaid. I feel sad about it. Can any form of labour be fully physical or intellectual? This question maybe debateable for discussants, let it be, but who bothers of it. World has no time for your concerns or never wanted to listen you perhaps.

All religious script advocated that a person is free to choos his/her karmas, but to what extent social pattern accepts and denies it is a question. Even today it is existing frame that Community of bhangi should keep cleaning garbage's and toilets used by other peoples, as if it is there duty accepted by their will. As long as social discrimination remains based on one's financial position, status, ownership etc, division of labour is its periphery I believe.

I saw and talked to you on and off from my childhood, but I cannot do anything to end this mal-practice. One night I was awaken and heard your sound of whistling. You were on your round of your work and it was raining outside. You left your family, village, region and country (Nepal) to win bread for yourself and family. When I enquired either to you or to your colleagues about visiting family back in Nepal, it is shocking to know that once a year or twice in three years you get to meet your family. At the end of each month you have to take several rounds to see occupier of each house and request for your small amount of rupees may be 50, 100 or 200 max. Sometimes he gives your earning. At times you don't get it from inhabitants. Despite it you have been toiling here in rural and urban part of India since long. Now these days in all big cities every residential area is having its guard appointed so it reduces your earning more.

I hope that for your next generations you will think of becoming benevolent parent by giving better education to open new avenues of career for your family members. What I am speaking of? Each parent wanted to educate his children in a best way possible, but situations arises when parents force children to work. You should be firm of the opinion that in any condition you should support your children to go to school and let them find different gateways to fight for better life.

I pray for better days of you and your following generations. May your children find better teachers and better friends to grow with.

In case you feel that Kailas is of any kind of worth help, you can drop me request by your way.

Yours Lovingly,
Kailas

ನನ್ನಾಕೆಗೊಂದು ಪತ್ರ

'ನನ್ನ ಒಲವಿನ ಮಾನು,
ಏನು ಮೋಡಿ ಮಾಡಿದೆ ನೀನು
ನಿಲ್ಲದಲ್ಲೆ ಜೀವ ನಿನ್ನ ಬಿಟ್ಟು ಅರೆಕ್ಷಣವು
ಬೇಗ ಬಂದು ಸೇರು ನನ್ನನು
ಬರಿದಾದ ಈ ಬಾಳನು'

ಗೆಳತಿ ಬಹುಶಃ ಈ ಮೇಲಿನ ಒಂದು ಸಣ್ಣ ಕವನ ನೋಡಿ ನಿನಗೆ ನಗೆ ಬರುತಿರಬಹುದು. ನಗು ಆದರೆ ನಾನು ಹೇಳುವ ಒಂದು ಮಾತನ್ನಂತು ನೀನು ಗಮನಿಸು. ಅದೇನೆಂದರೆ ನಾನು ಇಂದು ನಿಮ್ಮ ಮನೆಗೆ ಬಂದಿದ್ದೆ, ಆದರೆ ನೀನು ಇರಲಿಲ್ಲ. ಯಾರಿಗೆ ಕೇಳಬೇಕೆಂದು ತೋಚದೆ ನಿನ್ನ ತಂಗಿಯನ್ನು ವಿಚಾರಿಸಿದೆ. ಅವಳು ಹೇಳಿದಳು ನಿನು ಕಾಲೇಜಿಗೆ ಹೋಗಿರುವೆ ಎಂದು. ಅದನ್ನು ಕೇಳಿ ನನಗೆ ನಿನ್ನ ಮೇಲೆ ಬಹಾಳ ಕೋಪ ಬಂದಿದೆ. ಏಕೆಂದರೆ ನೀನು ನಿನ್ನೆ ಬರೆದ ಪತ್ರದಲ್ಲಿ ಹೇಳಿದ್ದ ಕಾಲೇಜಿಗೆ ಹೋಗುವುದಿಲ್ಲವೆಂದು. ಹೀಗಾಗಿ ನಾನು ಕೂಡ ನನ್ನ ಕಾಲೇಜಿಗೆ ಹೋಗದೆ ಇಲ್ಲೆ ಉಳಿದುಕೊಂಡೆ. ಆದರೆ ನೀನು ಹೀಗೆ ನನಗೆ ಏಕೆ ಸುಳ್ಳು ಹೇಳಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ನಿನಗೆ ಇಷ್ಟ ಇಲ್ಲದಿದ್ದರೆ ಹೇಳು ನಾನೇನು ನಿನಗೆ ಒತ್ತಯ ಮಾಡುವುದಿಲ್ಲ. ನಾನು ಪದೆ ಪದೆ ಕೇಳುತ್ತಲೇ ಇದ್ದೇನೆ. ಒಂದು ಸಲ ಚೆನ್ನಾಗಿ ಮುಖ ಕೊಟ್ಟು ಮಾತನಾಡುತ್ತೀಯ ಇನ್ನೊಂದು ಸಲ ಏನೊಂದು ಮಾತತನಾಡದೇ ಮೌನವಾಗಿಯೇ ಹೋಗುತ್ತೀಯ ಇದರಿಂದಾಗಿ ನನಗೆ ಯಾವುದೇ ಒಂದು ನಿರ್ಧಾರಕ್ಕೆ ಬರುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇಂದೇ ನೀನು ನನಗೆ ತಿಳಿಸಲೇ ಬೇಕು. ನನ್ನ ಮೇಲೆ ನಿನಗೆ ನಿಜವಾಗಿಯೂ ಪ್ರೀತಿ ಇದ್ದರೆ ಇಂದು ಸಂಜೆಯ ಓಲಗೆ ಇದಕ್ಕೆ ಉತ್ತರವನ್ನು ನೀಡುತ್ತೀಯ ಇಲ್ಲದಿದ್ದರೆ ಅದು ಬೇರೆ ವಿಚಾರ ಎಂದುಕೊಂಡು ಸುಮ್ಮನಾಗುತ್ತೇನೆ.

ಇಂತಿ ನಿನ್ನ ಪ್ರೀತಿಯ

\- ಜಿಕೆ

ನನ್ನೊಲವಿನ ಪ್ರಿಯತಮಗೆ,

ಇಷ್ಟು ಬೇಗ ಕೋಪ ಮಾಡಿಕೊಳ್ಳುವುದು ಸರಿಯಲ್ಲ ಎಂದು ನನ್ನ ಭಾವನೆ. ಏಕೆಂದರೆ ನನ್ನ ತಂಗಿ ಏನೋ ಹೇಳಿದಳು ಎಂದ ಮಾತ್ರಕ್ಕೆ ಅದನ್ನೆ ನಂಬಿ ಹೀಗೆ ಮನಸ್ಸನ್ನು ಕೆಡಿಸಿಕೊಂಡು ಪತ್ರ ಬರೆಯುವುದು ಸರಿಯಲ್ಲ. ನಾನು ನಿಮ್ಮನ್ನು ಪ್ರೀತಿಸಲು ಶುರು ಮಾಡಿ ಮೂರು ವರ್ಷಗಳಾಗಿವೆ. ಈಗ ಮತ್ತೆ ಕೇಳುತ್ತಿದ್ದೀರಿ ಇಷ್ಟ ಇದೆನಾ ಅಥವಾ ಇಲ್ಲಾ ಎಂದು. ಇದು ಮೂರು ವರ್ಷದ ಹಿಂದೆ ಕೇಳಿದ ಮಾತು. ಮತ್ತೆ ಕೇಳುವ ಅವಶ್ಯಕತೆಯಿಲ್ಲ ಎಂದು ನನ್ನ ಭಾವನೆ. ಏಕೆಂದರೆ ನೀವು ಕೇಳಿದ ಈ ಮಾತಿಗೆ ಉತ್ತರ ನಾನು ಮೂರು ವರುಷಗಳ ಹಿಂದೆಯೆ ನೀಡಿದ್ದಾಗಿದೆ. ಈಗ ಮತ್ತೆ ಮತ್ತೆ ಹೇಳುವ ಅವಶ್ಯಕತೆಯಿಲ್ಲ. ನಿನ್ನೆ ನನ್ನ ತಂಗಿಗೆ ಹೇಳಿದ್ದೆ ನಾನು ನಾಳೆ ಕಾಲೇಜಿಗೆ ಹೋಗುತ್ತೇನೆಂದು. ಆದರೆ ನಾನು ಇಂದು ಮುಂಜಾನೆ ಅವಳು ಏಳುವುದಕ್ಕಿಂತಲೂ ಮುಂಚೆಯೇ ನಮ್ಮ ಚಿಕ್ಕಮ್ಮನ ಮನೆಯ ಕಡೆಗೆ ಹೋಗಿದ್ದೆ. ಅವಳು ಅದನ್ನು ನೋಡಿಲ್ಲ. ಅದೆ ಸಂದರ್ಭದಲ್ಲಿ ನೀವು ಅವಳಿಗೆ ಕೇಳಿದ್ದೀರಿ. ಆಗವಳು ನಾನು ದಿನಾ ಬೆಳಗಿನ ಬಸ್ಸಿಗೆ ಕಾಲೇಜಿಗೆ ಹೋಗುತ್ತೇನೆ ಹೀಗಾಗಿ ಮನೆಯಲ್ಲಿ ಇಲ್ಲದಿರುವುದನ್ನು ನೋಡಿ ಕಾಲೇಜಿಗೆ ಹೋಗಿದ್ದಾಳೆಂದುಕೊಂಡು ನಿಮಗೆ ಹೇಳಿದ್ದಾಳೇ. ಈಗ ಹೇಳಿ ನಾನು ನಿಮ್ಮ ಪ್ರಶ್ನೆಗೆ ಏನೆಂದು ಉತ್ತರಿಸಲಿ?

ಒಂದು ಮಾತು ಹೇಳುತ್ತೇನೆ ಕೇಳಿ. ನಾನು ನಿಮಗೆ ಮನಸೋತದ್ದು ನಿಮ್ಮ ಪತ್ರ ಬರೆಯುವ ಶೈಲಿಯಿಂದಲೇ. ಏಕೆಂದರೆ ನನ್ನ ಮನಸನ್ನು ಸೆಳೆದಿರುವುದೇ ನಿಮ್ಮ ಬರವಣಿಗೆ. ನಿಮ್ಮ ಬಣ್ಣವಾಗಲಿ ಮುಖವಾಗಲಿ ಯಾವತ್ತು ನನಗೆ ವಿಷಯವಾಗಲೇ ಇಲ್ಲ. ಹೀಗಿದ್ದು, ಪದೆ ಪದೆ ನೀವು ನನಗೆ ಇಲ್ಲ ಸಲ್ಲದ ಪ್ರಶ್ನೆಗಳನ್ನು ಅಸಂಬದ್ದವಾಗಿ ಕೇಳಿ ನನ್ನ ಮನಸನ್ನು ಕೆಡಿಸಬೇಡಿ. ಸುಂದರವಾಗಿ ಪತ್ರ ವರೆಯುವ ನಿಮ್ಮ ಕೈಯಿಂದ ಇಂಥ ಭಾವನೆಗಳೆ ಇಲ್ಲದ ಜಗಳದ ಮಾತುಗಳನ್ನು ಹೊರಡಿಸುವ ನಿಮ್ಮ ಅಕ್ಷರಗಳನ್ನು ಓದುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ಈಗ ನಿಮ್ಮ ಮನಸನ್ನು ತಿಳಿಗೊಳಿಸುವುದಕ್ಕೆ ನಾನೊಂದು ಹಾಡನ್ನು ಈ ಪತ್ರದೊಂದಿಗೆ ಕಳಿಸುತ್ತಿದ್ದೇನೆ.

'ಯಾರಿಲ್ಲದ ಮನೆಯಲ್ಲಿ ಸಪ್ಪಳಿಲ್ಲದೆ ಬಂದು
ಮುತ್ತಿಟ್ಟೆ ನನ್ನ ಕೆನ್ನೆಗಂದು
ಆ ಮುತ್ತಿನ ಗತ್ತಿನಲ್ಲಿ ಸೋತು ಹೋದೆ ನಾನು
ಎದೆಗಪ್ಪಿಕೊಂಡೆ ನೀನೆ ನನ್ನವನೆಂದು'

'ಅಂದಿನ ಬಿಸಿಯಪ್ಪುಗೆಯಲ್ಲಿ ನಿನ್ನ ಏದುಸಿರಿನ
ಸುಖಸ್ಪರ್ಶದಿ ಮರೆತೆ ಬೇರೆಲ್ಲವನ್ನು
ನೀನೇ ಆದೆ ನನಗೆ ಎಲ್ಲವೂ
ಅಂದೆ ನೀಡಿದೆ ನನ್ನ ತನು ಮನವೆಲ್ಲವು'.

ಅದನ್ನು ಓದಿ ಸಂತಸವಾಗಿ ನನ್ನ ಮನ ಅರಳುವಂತೆ ಒಂದು ಸುಂದರ ಪತ್ರವನ್ನು ಬರೆದು ನನಗೆ ತಲುಪಿಸುತ್ತೀರೆಂದು ಭಾವಿಸಿ ನಿಮ್ಮ ಪತ್ರದ ದಾರಿಯನ್ನು ಕಾಯುತ್ತಿರುವ.....

ನಿಮ್ಮ

\- ಮಾನು

ಗೆಳತಿ,

ಮೆಚ್ಚಿದೆ ನಿನ್ನ ತಾಳ್ಮೆಗೆ, ಹಾಗೆಯೇ ನಾಚಿದೆ ನನ್ನಯ ಅವಸರಕ್ಕೆ. ದಯಾಮಾಡಿ ತಪ್ಪು ತಿಳಿದುಕೊಳ್ಳಬೇಡ ಮಾನು, ನಾನು ನಿನ್ನ ಮೇಲೆ ಸಿಟ್ಟಿಗೆ ಬಂದದ್ದು ನಿನ್ನ ಮೇಲಿನ ಪ್ರೀತಿಯಂದಲೇ ಹೊರತು ಬೇರೆ ಯಾವುದೇ ಕಾರಣಕ್ಕೂ ಅಲ್ಲ. ಏಕೆಂದರೆ ನೀನು ಒಂದರಗಳಿಗೆ ನನ್ನ ಕಣ್ಣೆದುರಿಗೆ ಕಾಣದಿದ್ದರೂ ಅದೇನೋ ಕಳೆದುಕೊಂಡಂತೆ ಭಾಸವಾಗುತ್ತದೆ. ಅದಕ್ಕೆ ಪದೆ ಪದೆ ಮಾನು ಮಾನು ಎಂದು ನಿನ್ನನ್ನು ಅರಸುತ್ತಾ ಹಾಗೆಯೇ ಅರಚುತ್ತಾ ತಿರುಗುವೆನು. ಹೀಗಾಗಿ ಒಂದು ಕಷಣ ಕೋಪಿಸಿಕೊಂಡೆ ಅದಕ್ಕಾಗಿ ಹಾಗೆ ಪತ್ರ ಬರೆದೆ. ಹೀಗೆ ಕೋಪದಲ್ಲಿ ಬರೆದ ಒಂದೇ ಪತ್ರದಲ್ಲಿ ನನ್ನ ಪ್ರೀತಿಯನ್ನು ಅಳೆಯಬೇಡ ಗೆಳತಿ. ನಿನ್ನು ಬಿಟ್ಟು ಬದುಕುವ ಶಕ್ತಿ ನನ್ನಲ್ಲಿ ಇಲ್ಲ. ನಿನ್ನ ಪತ್ರಕ್ಕೂ, ಕವನಕ್ಕೂ ಹಾಗು ನಿನ್ನ ನಿಶ್ಕಲ್ಮಶ ಪ್ರೀತಿಗೂ ನಾನು ಒಂದು ಪ್ರೀತಿ ತುಂಬಿದ ಉತರವನ್ನು ಕಳಿಸುತ್ತಿದ್ದೇನೆ. ಇದನ್ನು ಓದಿದ ತಕ್ಷಣ ಬಂದು ಬಿಡಬೇಕು ನೀನು ಏಕೆಂದರೆ ನನ್ನ ಕೆನ್ನೆ ಕೇಳುತ್ತಿದೆ ನಿನ್ನಧರ ಮುದ್ರೆ.

'ಬಂದು ಬಿಡು ಗೆಳತಿ ಈ ಗಳಿಗೆಗೆ
ಕಾಯಲು ಆಗದು ನನಗೆ
ನಿನ್ನ ಮೊಗದ ನಗೆಯ ಚಲುವು
ನೋಡಬಯಸಿದೆ ನನ್ನ ನಯನವು

ನಿನ್ನ ದೇಹ ಸಿರಿಯ ಅಪ್ಪಬೇಕೆನುತಿವೆ ನನ್ನ ತೋಳುಗಳು
ಮಧುರ ಮೈತ್ರಿಗೆ ಸಿದ್ದಗೊಳ್ಳುತ್ತಿದೆ ತನವು
ತಡೆಯಲಾಗದೆ ತೊಳಲಾಡುತಿರುವೆ ಇರುಳಿನಲ್ಲಿ
ಬಂದು ಬಿಡು ಗೆಳತಿ ಇಂದಿನ ಬೆಳಗಿನಲಿ

ಬರೆಯಬೇಡ ಇದಕೇನೊಂದು ಉತ್ತರ
ನಿನ್ನಧರ ಮುತ್ತಿನ ಮುದ್ರೆಯೊಂದು ಬೇಕು
ತೋಳಪ್ಪುಗೆಯ ಬಿಸಿಯುಸಿರಿನಲ್ಲಿ
ನಿನ್ನ ಪಿಸು ಮಾತನೊಂದು ನಾ ಕೇಳಬೇಕು'.

ಇಂತಿ ನಿನ್ನ ಪ್ರೀತಿಯ

- ಜಿಕೆ

(ಇದು ಮದುವೆಗೆ ಮುಂಚೆ ನಾನು ನನ್ನಾಕೆಗೆಂದು ಬರೆದ ಪತ್ರ ಮತ್ತು ಅವಳು ನನಗೆ ಬರೆದ ಉತ್ತರವನ್ನು ಇಲ್ಲಿ ಬರೆದಿದ್ದೇನೆ. ಈ ಪತ್ರ ನೀಡಿದ ಪುಳಕ ನನಗೆ ಇಂದಿಗೂ ಅಲ್ಲ ಇಡೀ ಜೀವಮಾನದಲ್ಲು ಮರೆಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದರಲ್ಲಿ ಸಿಕ್ಕ ಮಧುರ ಅನುಭವ ರಸವತ್ತಾದ ಭಾವ ನನಗೆ ಯಾವತ್ತು ಸಿಗುವುದಕ್ಕೆ ಸಾಧ್ಯವಿಲ್ಲ. ಇಂಥ ಪತ್ರಗಳು ನಾನು ಅವಳಿಗೆ ಅವಳು ನನಗೆ ಬರೆದದ್ದು ಎಷ್ಟೆಂದು ಲೆಕ್ಕವಿಲ್ಲದಷ್ಟು ಬರೆದಿದ್ದೇವೆ. ಅವುಗಳೆಲ್ಲದರ ಮಾದರಿಯಾಗಿ ಇಂದಿನ ಈ ಬಯಲು ಲೇಖನದಲ್ಲಿ ಒಂದನ್ನು ಉದಾಹರಣೆಗಾಗಿ ಮತ್ತು ನನ್ ಲೇಖನಾಕ್ಕಾಗಿ ಆರಿಸಿಕೊಂಡಿದ್ದೇನೆ.)



ಕ್ಷೇಮ ಶ್ರೀ ದಿನಾಂಕ: ೧೪-೦೭-೨೦೧೬
ಸ್ಥಳ: ಮಂಡ್ಯ

ವಿಷಯ: ರೀ ಸ್ವಲ್ಪ ನಮ್ಮ ಜೊತೆಗೂ ಮಾತಾಡ್ರೀ ಪ್ಲೀಸ್.....

ಹಲೋ ಅಪ್ಪಾ, ಹಲೋ ಅಮ್ಮ, ಹಲೋ ಪ್ರೀತಿ, ಹಲೋ ಸ್ನೇಹ..... ಇತ್ತೀಚಿನ ದಿನಗಳಲ್ಲಿ ನಮ್ಮ ಸುತ್ತ-ಮುತ್ತ ಇಂತದ್ದೇ ಮಾತುಗಳು ತುಂಬಾ ಸಾಮಾನ್ಯ ವಾಗಿಬಿಟ್ಟಿದೆ. ಎಲ್ಲಿ ನೋಡಿದರೂ, ಯಾರನ್ನೂ ನೋಡಿದರೂ ಕೈಯಲ್ಲಿ ಒಂದು ಮೊಬೈಲ್, ಟ್ಯಾಬ್ ಇಟ್ಟುಕೊಂಡು ಅವರ ಲೋಕದಲ್ಲಿ ತುಂಬಾ ಬಿಜಿಯಾಗಿಬಿಟ್ಟಿರುತ್ತಾರೆ. ತಮ್ಮ ಅಕ್ಕ-ಪಕ್ಕದಲ್ಲಿ ಯಾರಿದ್ದಾರೆ, ಏನಾಗುತ್ತಿದೆ ಎಂಬ ಪರಿವೆಯೂ ಕೂಡ ಯಾರಿಗೂ ಇರುವುದಿಲ್ಲ, ಅಷ್ಟೇ ಅಲ್ಲದೇ ಅದನ್ನು ತಿಳಿದುಕೊಳ್ಳುವ ಮನಸ್ಸೂ ಕೂಡ ಇರುವುದಿಲ್ಲ. ನಾವು ಇಂದು ಆಧುನಿಕತೆಯ ಹೆಸರಿನಲ್ಲಿ ಗೊತ್ತು ಗುರಿಯಿಲ್ಲದೇ ಕೇವಲ ಓಡುವ ಕುದುರೆಗಳಾಗಿ ಬಿಟ್ಟಿದ್ದೇವೆ. ಮನೆಯಲ್ಲಿ ತಂದೆ, ತಾಯಿ, ಸಹೋದರ, ಸಹೋದರಿಯರಿಗೂ ಸಮಯ ಕೊಡದಷ್ಟು ಜಿಪುಣರಾಗಿ ಬಿಟ್ಟಿದ್ದೇವೆ. ಇಂದು ಟಿ. ವಿ, ಮೊಬೈಲ್, ಲ್ಯಾಪ್‌ಟಾಪ್, ಇಂಟರ್ ನೆಟ್, ವಾಟ್ಸಅಪ್, ಫೇಸ್ ಬುಕ್, ಟ್ವಟರ್, ಮೆಸೇಜ್, ಕಾಲ್ ಗಳಲ್ಲೇ ನಮ್ಮ ಎಷ್ಟೋ ಯುವಕ ಯುವತಿಯರು ಮುಳುಗಿ ಹೋಗಿರುತ್ತಾರೆ. ಅದರಲ್ಲೂ ಕೆಲವರಂತು ತಾವು ಫೇಸ್ಬುಕ್ ನಲ್ಲಿ ಅಪ್‌ಲೋಡ್ ಮಾಡುವ ಪೋಟೋಗಳಿಗೆ ಲೈಕ್ ಬರದಿದ್ದರೆ ತಮ್ಮ ಪ್ರಾಣವನ್ನು ಕಳೆದು ಕೊಳ್ಳಲೂ ಕೂಡ ಮುಂದಾಗುತ್ತಾರೆ. ಇಂದು ಈ ಜಗತ್ತು ನಮ್ಮ ತಂತ್ರಜ್ಞಾನ, ಆಧುನಿಕತೆಯಿಂದ "ಒಂದು ಚಿಕ್ಕ ಗ್ರಾಮ"ವಾಗಿದೆ. "ವಸುದೈವ ಕುಟುಂಬಕಂ" ಎಂಬ ಮಾತನ್ನು ಈ ರೀತಿಯಲ್ಲಿ ನಾವು ಇಂದು ತಿಳಿಯುತ್ತಿದ್ದೇವೆ. ಆದರೆ ಕೆಲವು ವೇಳೆ ನಮ್ಮ ಕಣ್ಣಮುಂದೆ ಯಾವುದೋ ಅವಘಡವಾಗಿ ಯಾರದರೂ ಸಾಯುವ ಸ್ಥಿತಿಯಲ್ಲಿ ಇದ್ದರೆ ಅವರನ್ನು ಬದುಕಿಸುವ ಪ್ರಯತ್ನವನ್ನು ಮಾಡದ ನಮ್ಮ ಇಂದಿನ ಜನರು ಅದರ ಫೋಟೋ ತೆಗೆದು ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಹಾಕುತ್ತಾರೆ ಅಷ್ಟೇ. ಅದೇ ಅವರ ಸಾಧನೆ ಯಾಗಿರುತ್ತದೆ.

ಯಾವಾಗಲೂ ನನಗೆ ಕಾಡುತ್ತಿರುವುದು ಇಷ್ಟೇ, ಯಾಕೆ? ಮನುಷ್ಯ ತನ್ನ ಮಾನವೀಯತೆಯನ್ನು ದಿನೇ ದಿನೇ ಕಳೆದುಕೊಂಡು ತಾನು ಸ್ವಾವಲಂಬಿಯಾಗಿ ಬದುಕುವೆ, ನನಗೆ ಯಾರ ಹಂಗೂ ಬೇಡ ಎಂಬ ಭ್ರಮೆಯಲ್ಲಿ ತನ್ನ ಸುತ್ತ ತಾನೇ ಗೋಡೆಯನ್ನು ಕಟ್ಟಿಕೊಂಡು ಬದುಕುತ್ತಿದ್ದಾನೆ. ಇದರಿಂದಾಗಿ ಅವರ ತಂದೆ, ತಾಯಿ, ಸಂಬಂಧಿಕರ ಜೊತೆ ಮಾತನಾಡುವುದು, ಅವರಿಗಾಗಿ ಸಮಯಕೊಡುವುದು ಅವನಿಗೆ ಬೇಸರದ, ನಿರ್ಲಕ್ಷದ ಕೆಲಸವಾಗಿ ಬಿಟ್ಟಿರುತ್ತದೆ. ಹಿಂದೆ ನಮ್ಮ ಪೂರ್ವಿಕರು ಬೇರೆ ಊರಿನಲ್ಲಿರುವ ತಮ್ಮ ಸಂಬಂಧಿಕರನ್ನು ನೋಡಲು ಹೋಗಬೇಕಾದರೆ, ಯಾವುದೋ ಶುಭಕಾರ್ಯಕ್ಕಾಗಿ ಅಥವಾ ಅಶುಭ ಕಾರ್ಯಕ್ಕೆ ಹೋಗಬೇಕಾದರೆ ಎಷ್ಟೋ ತಿಂಗಳುಗಳ ಪ್ರಯಾಣ ಮಾಡಿ ಹೋಗಬೇಕಿತ್ತು. ಒಂದು ಪತ್ರ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಲುಪ ಬೇಕಾದರೆ ಎಷ್ಟೋ ದಿನಗಳು ಬೇಕಾಗುತ್ತಿತ್ತು. ಒಂದು ಟೆಲಿಗ್ರಾಮ್ ಬಂದರೆ ಮನೆಯವರೆಲ್ಲಾ ಗಾಬರಿಯಾಗುತ್ತಿದ್ದರು.

ಇಂತಹ ಸಂದರ್ಭದಲ್ಲಿ ಈ ಆಧುನಿಕತೆ ನಮಗೆ ನಮ್ಮ ಸಂಬಂಧಗಳನ್ನು ಬೆಳೆಸುವಲ್ಲಿ ವರದಾನವಾಗಬೇಕಿತ್ತು! .... ಆದರೆ ಇಂದು ಇವು ನಮ್ಮ ಸಂಬಂಧಗಳನ್ನು ಮುರಿಯುತ್ತಾ, ಮನುಷ್ಯ ಮನುಷ್ಯರ ನಡುವೆ ದೊಡ್ಡ ಕಂದರವನ್ನೇ ಸೃಷ್ಟಿ ಮಾಡುತ್ತಿವೆ. ನನಗೆ ಏಕೆ ಈ ಪತ್ರ ಬರೆಯಬೇಕೆಂದು ಅನಿಸುತ್ತಿದೆ ಎಂದರೆ ನಮ್ಮ ಆಧುನಿಕತೆ, ತಂತ್ರಜ್ಞಾನವನ್ನು ದೂಷಿಸುವ ಉದ್ದೇಶದಿಂದಲ್ಲ. ನನಗೆ ಅನಿಸುತ್ತಿರುವುದು ಮನುಷ್ಯರು ತಮ್ಮಲ್ಲಿರುವ ನಾನೇ ಸರಿ, ನಾನು ಮಾಡಿದ್ದನ್ನು ಎಲ್ಲರೂ ಒಪ್ಪಲೇಬೇಕೆಂಬ ಮನೋಧೋರಣೆಯನ್ನು ಬಿಟ್ಟು ಆಧುನಿಕತೆಯ ಗುಂಗಿನಿಂದ ಹೊರಬಂದು ತಮ್ಮ ಸುತ್ತ ಮುತ್ತಲಿರುವ ಜನರನ್ನು ಮಾತನಾಡಿಸಬೇಕೆಂದು. ಏಕೆಂದರೆ ಮನುಷ್ಯನು ವಸ್ತುಗಳನ್ನು ಉಪಯೋಗಿಸಬೇಕು, ಮನುಷ್ಯರನ್ನು ಪ್ರೀತಿಸಬೇಕು ಎಂಬುದು ನನ್ನ ನಿಲುವು. ಆದರೆ ಇಂದು ಮಾನವ ವಸ್ತುಗಳನ್ನು ಅತಿಯಾಗಿ ಪ್ರೀತಿಸುತ್ತಾ, ಮನುಷ್ಯರನ್ನು ತನ್ನ ಕೆಲಸ ಕಾರ್ಯಗಳ ಸಂದರ್ಭದಲ್ಲಿ ಮಾತ್ರ ಬಳಸಿಕೊಳ್ಳುವಂತಹ ಧೋರಣೆಯನ್ನು ಹೊಂದುತ್ತಿದ್ದಾನೆ. ಇದು ಹೀಗೆ ಮುಂದುವರಿದರೆ ಮುಂದಿನ ನಮ್ಮ ಜನಾಂಗದವರು ಕೇವಲ "ಏಕಾಂಗಿ"ಗಳಾಗಿ ವಸ್ತುಗಳ ಜೊತೆ ಯಾವುದೇ ಭಾವನೆಗಳಿಲ್ಲದೇ ಯಂತ್ರಗಳ ರೀತಿ ತಮ್ಮ ಅಮೂಲ್ಯವಾದಂತಹ ಬದುಕನ್ನು ಬದುಕ ಬೇಕಾಗಬಹುದು ಎಂಬ ಕಳಕಳಿಯಿಂದ ನಾನು ಈ ಪತ್ರವನ್ನು ನಮ್ಮ ಎಲ್ಲಾ ಆಧುನಿಕ ಮಾನವ ಜನಾಂಗಕ್ಕೆ ಬರೆಯುತ್ತಿದ್ದೇನೆ. ನಾನು ಹೇಳಬಯಸಬೇಕೆಂಬ ಮಾತು ಇಷ್ಟೆ. ಪ್ಲೀಸ್ ಮೊದಲು ಮನುಷ್ಯರನ್ನು ಮನುಷ್ಯರಂತೆ ಕಾಣಿ, ಅವರ ಭಾವನೆಗಳಿಗೆ ಸ್ಪಂದಿಸಿ, ಅವರನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಮಾಡಿ. ಮನುಷ್ಯ ಬದುಕಿನಲ್ಲಿ ಏನೇ ಹಣ, ಆಸ್ತಿ, ಸಂಪತ್ತು, ಸಾಮಾಜಿಕ ಜಾಲತಾಣಗಳಲ್ಲಿ ಹೊಂದಿರುವ ಫಾಲೋಯರ್ ಗಳನ್ನು ಹೊಂದಿದ್ದರೂ, ಅವನು ಅತ್ತಾಗ ಅವನ ಕಣ್ಣಿನ ನೀರನ್ನು ಒರೆಸುವ ಕೈಗಳು, ಮನಸ್ಸಿಗೆ ಸಾಂತ್ವಾನ ಹೇಳುವ, ನಮ್ಮನ್ನು ಯಾವಾಗಲೂ ಕಾಳಜಿ ಮಾಡುವ ಹೃದಯಗಳು ಮಾತ್ರ ನಮ್ಮ ಜೊತೆ ಇದ್ದಾಗ ನಮ್ಮ ಜೀವನ ಸಾರ್ಥಕವಾಗಲು ಸಾಧ್ಯವಾಗುತ್ತದೆ ಅಲ್ಲವೇ? ಈ ಕುರಿತು ನೀವೇ ಇನ್ನಷ್ಟು ಆಲೋಚಿಸಿ ನೋಡಿ.....

ಧನ್ಯವಾದಗಳು,
ಇಷ್ಟು ಹೊತ್ತು ನನ್ನ ಪತ್ರವನ್ನು ಓದಿದ್ದಕ್ಕೆ.

ಇಂತಿ ನಿಮ್ಮ ಸ್ನೇಹಿತೆ,
- ಭವ್ಯ. ಬಿ

Bayalu Coordinators:

1. **Gulbarga: Gundappa Katekar:** gundappa.katekar@azimpremjifoundation.org
2. **Mandya: Ravi B T:** ravi@azimpremjifoundation.org
3. **Bangalore: Raghavendra Herle:** raghavendra.herle@azimpremjifoundation.org
4. **Yadgir: Rajashri Nayak**: rajashri.nayak@azimpremjifoundation.org